ಕರ್ನಾಟಕ ಸರ್ಕಾರ
ಕೃಷಿ ಇಲಾಖೆ

ಸಂ:ಸಸಂವಿ/ತಾಂ/ಕೃ.ಪ.ಗು.ನಿ/2021-22

ಕೃಷಿ ಆಯುಕ್ತರ ಕಾರ್ಯಾಲಯ,
ಶೇಷಾದ್ರಿ ರಸ್ತೆ, ಬೆಂಗಳೂರು-01,
ದಿನಾಂಕ: 16.06.2021

ಇವರಿಗೆ,

ಎಲ್ಲಾ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು

ವಿಷಯ: ರೈತರಿಗೆ ಗುಣಮಟ್ಟದ ರಸಗೊಬ್ಬರ, ಕೀಟನಾಶಕ ಮತ್ತು ಬೀಜಗಳ ಪೂರೈಕೆ ಕುರಿತು.

ಉಲ್ಲೇಖ: ಮಾನ್ಯ ಕೃಷಿ ಸಚಿವರ ಟಿಪ್ಪಣಿ ಸಂಖ್ಯೆ ಕೃಸನಿ/113/2020-21 ದಿನಾಂಕ 12.05.2021

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಗುಣಮಟ್ಟದ ರಸಗೊಬ್ಬರ, ಕೀಟನಾಶಕ ಮತ್ತು ಬೀಜಗಳ ಪೂರೈಕೆಯಾಗುವ ನಿಟ್ಟಿನಲ್ಲಿ ಜಿಲ್ಲೆಯಲ್ಲಿ ಪರಿವೀಕ್ಷಕರುಗಳು ಅಗತ್ಯ ಕ್ರಮಗಳನ್ನು ವಹಿಸಲು ಅನೇಕ ಬಾರಿ ಸಭೆ, ವಿಡಿಯೋ ಸಂವಾದ ಮತ್ತು ಸುತ್ತೋಲೆಗಳ ಮೂಲಕ ಸೂಚಿಸಲಾಗಿರುತ್ತದೆ. ಈ ಸಂಬಂಧ ಮಾನ್ಯ ಕೃಷಿ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ 22.04.2021ರಂದು ಜರುಗಿದ ವಿಡಿಯೋ ಸಂವಾದದಲ್ಲಿಯೂ ಮುಂಜಾಗ್ರತಾ ಕ್ರಮ ವಹಿಸಿ ಸೂಚಿಸಲಾಗಿಯೂ ಸಹಾ ಕಳಪೆ ಗುಣಮಟ್ಟದ ಪರಿಕರಗಳು ಮಾರಾಟವಾಗುತ್ತಿರುವ ಬಗ್ಗೆ ದೂರುಗಳು ಸ್ವೀಕೃತವಾಗುತ್ತಿರುವುದಾಗಿ ತಿಳಿಸಿರುತ್ತಾರೆ.

ಮುಂದುವರೆದು, ಯಾವುದೇ ಕಾರಣಕ್ಕೂ ಕಳಪೆ ಕೃಷಿ ಪರಿಕರಗಳು ಮಾರಾಟವಾಗದಂತೆ ತಡೆಯಲು ಸೂಚಿಸುತ್ತಾ, ಅಂತಹ ಪ್ರಕರಣಗಳು ಕಂಡುಬಂದಲ್ಲಿ ಜಿಲ್ಲೆಯ ಸಂಬಂಧಿಸಿದ ಅಧಿಕಾರಿಗಳನ್ನು ನೇರ ಹೊಣೆಗಾರರನ್ನಾಗಿ ಮಾಡಿ ಶಿಸ್ತು ಕ್ರಮ ಜರುಗಿಸಲು ಸೂಚನೆಯನ್ನು ನೀಡಿರುತ್ತಾರೆ.

ಆದುದರಿಂದ ಜಿಲ್ಲೆಯಲ್ಲಿ ಕೃಷಿ ಪರಿಕರಗಳ ತಯಾರಿಕಾ ಘಟಕ ಮತ್ತು ಮಾರಾಟ ಮಳಿಗೆಗಳ ತಪಾಸಣೆಯನ್ನು ಕೈಗೊಂಡು ಉತ್ತಮ ಗುಣಮಟ್ಟದ ಕೃಷಿ ಪರಿಕರಗಳು ರೈತರಿಗೆ ತಲುಪುವಂತೆ ಕ್ರಮವಹಿಸಲು ಈ ಮೂಲಕ ಮತ್ತೊಮ್ಮೆ ಸೂಚಿಸಿದೆ. ತಪ್ಪಿದಲ್ಲಿ ಕರ್ತವ್ಯ ಲೋಪದಡಿ ಸಂಬಂಧಿಸಿದ ಪರಿವೀಕ್ಷಕರುಗಳು ಹಾಗು ಮೇಲಾಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಜರುಗಿಸಲಾಗುವುದು.

21/06/21
ಕೃಷಿ ಆಯುಕ್ತರು

D:\Data\RAM\Letters\Circulars\Circulars 2015-16_2020-21.docx

ಬಿ.ಸಿ. ಪಾಟೀಲ್
ಕೃಷಿ ಸಚಿವರು ಹಾಗೂ
ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವರು

ಕೊಠಡಿ ಸಂಖ್ಯೆ: 406, 407
4ನೇ ಮಹಡಿ, ವಿಕಾಸಸೌಧ
ಬೆಂಗಳೂರು–560 001
ದೂರವಾಣಿ: 080–22252475
080–22377790
bpatilc@gmail.com

ಕ್ರ.ಸಂ:– ಕೃ.ಸ.ನಿ/113/2020–21 ದಿನಾಂಕ: 12/05/2021

**ಟಿಪ್ಪಣಿ**

ರಾಜ್ಯಾದ್ಯಾಂತ ಮುಂಗಾರು ಹಂಗಾಮು ಪ್ರಾರಂಭವಾಗಿದ್ದು, ಕೃಷಿ ಪರಿಕರಗಳಾದ ಬಿತ್ತನೆ ಬೀಜ, ರಸಗೊಬ್ಬರ, ಪೀಡೆನಾಶಕಗಳನ್ನು ರೈತರು ರೈತ ಸಂಪರ್ಕ ಕೇಂದ್ರಗಳಲ್ಲಿ ಹಾಗೂ ಖಾಸಗಿ ಪರಿಕರ ಮಾರಾಟಾಗಾರರ ಮೂಲಕ ಖರೀದಿಸಿತ್ತಿರುವದು ಸರಿ ಅಷ್ಟೇ. ಗುಣಮಟ್ಟದ ಕೃಷಿ ಪರಿಕರಗಳನ್ನು ರೈತರಿಗೆ ಸರಿಯಾದ ಸಮಯದಲ್ಲಿ ಒದಗಿಸುವದು ಇಲಾಖೆಯ ಆದ್ಯ ಕರ್ತವ್ಯವಾಗಿರುತ್ತದೆ.

ಆದರೆ ಕ್ಷೇತ್ರ ಮಟ್ಟದಿಂದ ಹಲವಾರು ರೈತರು ಹಾಗೂ ಜನಪ್ರತಿನಿಧಿಗಳು ಕಳಪೆ ಬಿತ್ತನೆ ಬೀಜ, ರಸಗೊಬ್ಬರ, ಹಾಗೂ ಪೀಡೆನಾಶಕಗಳನ್ನು ಮಾರಾಟ ಮಾಡುತ್ತಿರುವದನ್ನು ನನ್ನ ಗಮನಕ್ಕೆ ತಂದಿರುತ್ತಾರೆ. ಈಗಾಗಲೇ ಇದರ ಬಗ್ಗೆ, ದಿನಾಂಕ:–22–04–2021 ರಂದು ವಿಡಿಯೋ ಸಂವಾದದ ಮೂಲಕ ನಡೆದ ಸಭೆಯಲ್ಲಿ ಎಲ್ಲಾ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ಕಳಪೆ ಕೃಷಿ ಪರಿಕರಗಳು ಮಾರಾಟವಾಗದಂತೆ ಮುಂಜಾಗ್ರತೆ ಕ್ರಮ ವಹಿಸಲು ಹಾಗೂ ಕಾನೂನಿನ ರೀತಿಯ ಕ್ರಮ ವಹಿಸಲು ಸೂಚನೆ ನೀಡಲಾಗಿರುತ್ತದೆ. ಆದಾಗ್ಯೂ ಸಹ ಈ ರೀತಿಯ ದೂರುಗಳು ಬರುತ್ತಿರುವದು ವಿಷಾದನೀಯ. ಆದ್ದರಿಂದ ಯಾವುದೇ ಕಾರಣಕ್ಕೂ ಕಳಪೆ ಗುಣಮಟ್ಟದ ಕೃಷಿ ಪರಿಕರಗಳು ಮಾರಾಟವಾಗದಂತೆ, ಹಾಗೂ ಒಂದು ವೇಳೆ ಅಂತಹ ಪ್ರಕರಣಗಳು ಕಂಡು ಬಂದಲ್ಲಿ ಸಂಬಂಧಪಟ್ಟ ಅಧಿಕಾರಿಗಳನ್ನು ನೇರ ಹೊಣೆಗಾರರನ್ನಾಗಿ ಮಾಡಲಾಗುವದು ಎಂಬುದರ ಬಗ್ಗೆ ಎಲ್ಲಾ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಲು ಆದೇಶಿಸಿದೆ.

( ಬಿ.ಸಿ.ಪಾಟೀಲ್ )

ಗೆ,–
ಆಯುಕ್ತರು
ಕೃಷಿ ಇಲಾಖೆ,
ಶೇಷಾದ್ರಿ ರಸ್ತೆ, ಬೆಂಗಳೂರು,

ಪ್ರತಿ :–

01. ಅಪರ ಮುಖ್ಯ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಬೆಂಗಳೂರು,
02. ನಿರ್ದೇಶಕರು, ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು,